2. ಈಗ ಜನಸಂಖ್ಯೆಗನುಗುಣವಾಗಿ ಬಸ್ಸುಗಳು ಓಡಾಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ನಗರದ ಎಲ್ಲಾ ಸ್ಥಳಗಳಿಗೆ ಹೆಚ್ಚಿಗೆ ಬಸ್ಸುಗಳನ್ನು ಓಡಿಸಲು ಎಂದಿನಿಂದ ಜರೂರು ಕ್ರಮ ಕೈಕೊಳ್ಳಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

1. ಹುಬ್ಬಳ್ಳಿ ನಗರದಲ್ಲಿ 88 ನಗರ ಸಾರಿಗೆಗಳು 31 ಗ್ರಾಮಾಂತರ ಸಾರಿಗೆಗಳು ಹಾಗೂ ಹುಬ್ಬಳ್ಳಿ-ಧಾರವಾಡ ಪ್ರತ್ಯೇಕವಾಗಿ 62 ಸಾರಿಗೆಗಳು ಹೀಗೆ ಒಟ್ಟು 181 ಅನುಸೂಚಿಗಳು ಕಾರ್ಯಾಚರಣೆ ಮಾಡಲಾಗುತ್ತಿದೆ.

2. ಈಗ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಅನುಸೂಚಿಗಳನ್ನು ಓಡಿಸಲಾಗುತ್ತಿದೆ.

3. ನಗರದ ಎಲ್ಲಾ ಬಡಾವಣೆಗಳಿಂದ ನಗರ ಸಾರಿಗೆ ಓಡಿಸಲಾಗುತ್ತಿದೆ. ಪ್ರಯಾಣಿಕರ ದಟ್ಟಣೆಗೆ ಅನುಸರಿಸಿ ಹೆಚ್ಚಿನ ಸಾರಿಗೆ ಓಡಿಸಲು ಕ್ರಮಕೈಕೊಳ್ಳಲಾಗುವುದು.

ಸೂಳ್ಯ ತಾಲ್ಲೂಕಿಗೆ ಸಾರಿಗೆ ಬಸ್ ಡಿಪೋ ಮಂಜೂರಾತಿ.

1523(2211) ಶ್ರೀ ಎನ್. ಅಂಗಾರ, (ಸೂಳ್ಯ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂಳ್ಯ ತಾಲ್ಲೂಕಿಗೆ ಕೆ.ಎಸ್.ಆರ್.ಟಿ.ಸಿ. ಡಿಪೋ ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.

ಸೂಳ್ಯ ಕ್ಷೇತ್ರದಿಂದ ಅನೇಕ ಬೇಡಿಕೆಗಳು.

1524 (2215) ಶ್ರೀ ಎಸ್. ಅಂಗಾರ (ಸೂಳ್ಯ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?